ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)(ಕುಳಿತುಕೊಂಡು):– ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಹೇಳಿದೆ, ಕೇಳುವುದಿಲ್ಲವಲ್ಲ ?

ಶ್ರೀ ಸಿದ್ದರಾಮಯ್ಯ : Adjournment motion move ಮಾಡಿ discussion ಮಾಡುವುದಕ್ಕೆ ಬರುವುದಿಲ್ಲ. preliminary submission ಮಾಡಿ.

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರು ತೀರ್ಮಾನ ತೆಗೆದುಕೊಳ್ಳುತ್ತಾರೆ. ನೋಡಿದರೆ, ತಾವು detail ಆಗಿ discussion ಮಾಡುತ್ತಿದ್ದೀರಿ.

ಶ್ರೀ ಕೆ.ಜೆ. ಜಾರ್ಜ್(ಗೃಹ ಸಚಿವರು): Detail ಆಗಿ discussion ಮಾಡಿದರೆ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಇಲ್ಲಿದ್ದಾಗ preliminary submission ನಲ್ಲಿ ಒಂದೊಂದು ತಾಸು ಮಾತನಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ಒಂದೊಂದು ತಾಸು ? 2 ನಿಮಿಷಗಳಿಗಿಂತ ಹೆಚ್ಚಿಗೆ ನಾನು ಮಾಡಿಯೇ ಇಲ್ಲ.

(ಗೊಂದಲ)

2. ಪ್ರಶ್ನೋತ್ತರ.

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಡೀಮ್ಡ್ ವಿಶ್ವವಿದ್ಯಾಲಯಗಳ ಪರಿಕಲ್ಪನೆ

31(331) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅನುಸರಿಸಿರುವ ಮಾನದಂಡಗಳೇನು;

(ಇ) ಖಾಸಗಿ ವಿಶ್ವವಿದ್ಯಾಲಯಗಳ ಅನರ್ಹತೆಗೆ ತನಿಖೆ ಮಾಡಿ ನಿರ್ಧಾರ ಪರಿಗಣಿಸಲಾಗುವುದೇ ;

(ಈ) ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳ ಕುಲಸಚಿವರ ನೇಮಕವನ್ನು ಪಾರದರ್ಶಕಗೊಳಿಸಲು ಸರ್ಕಾರ ಮುಂದಾಗಿದೆಯೇ ;

(ಉ) ಹಾಲಿ ಇರುವ ಕುಲಸಚಿವರುಗಳನ್ನು ಬದಲಾವಣೆಗೊಳಿಸಿ ಹೊಸ ಕುಲಸಚಿವರನ್ನು ನೇಮಕ ಮಾಡುವ ಕುರಿತು ಪಟ್ಟಿಯನ್ನು ಸರ್ಕಾರವು ವಿಶ್ವವಿದ್ಯಾಲಯಗಳಿಂದ ಪಡೆದಿದೆಯೇ;

(ಊ) ಹೊಸ ಕುಲಸಚಿವರುಗಳನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು; ಇದಕ್ಕೆ ಅನುಸರಿಸುವ ಮಾನದಂಡ ಮತ್ತು ಪ್ರಕ್ರಿಯೆಗಳು ಯಾವುವು? (ವಿವರ ಒದಗಿಸುವುದು)

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಹಾಲಿ ಒಟ್ಟು 07 ಖಾಸಗಿ ವಿಶ್ವವಿದ್ಯಾಲಯಗಳು ಮತ್ತು 15 ಡೀಮ್ಡ್ ವಿಶ್ವವಿದ್ಯಾಲಯಗಳಿವೆ (ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ)

(ಆ) ಅನುಬಂಧ 2ರಲ್ಲಿ ನೀಡಿದೆ

(ಇ) ಖಾಸಗಿ ವಿಶ್ವವಿದ್ಯಾಲಯದ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಮಾತ್ರ ಪರಿಶೀಲಿಸಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

(ಈ) ಖಾಸಗಿ ವಿಶ್ವವಿದ್ಯಾಲಯ ಅಧಿನಿಯಮ ಪ್ರಕರಣ 19 ರನ್ವಯ ವಿಶ್ವವಿದ್ಯಾಲಯದ ಕುಲಾಧಿಪತಿಯವರು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಕುಲಸಚಿವರನ್ನು ನೇಮಕ ಮಾಡುತ್ತಾರೆ. ಇದರಲ್ಲಿ ಸರ್ಕಾರದ ಪಾತ್ರವಿರುವುದಿಲ್ಲ.

(ಉ) ಉದ್ಭವಿಸುವುದಿಲ್ಲ.

(ಊ) ಉದ್ಭವಿಸುವುದಿಲ್ಲ.

ಅನುಬಂಧ–1

ಖಾಸಗಿ ವಿಶ್ವವಿದ್ಯಾಲಯಗಳು :–

1) ಅಜೀಂ ಪ್ರೇಂಜೀ ವಿಶ್ವವಿದ್ಯಾಲಯ, ಬೆಂಗಳೂರು.

2) ಅಲಿಯನ್ಸ್ ವಿಶ್ವವಿದ್ಯಾಲಯ, ಬೆಂಗಳೂರು.

3) ರೇವಾ ವಿಶ್ವವಿದ್ಯಾಲಯ, ಬೆಂಗಳೂರು.

4) ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.

5) ಪಿಇಎಸ್ ವಿಶ್ವವಿದ್ಯಾಲಯ, ಅಧಿನಿಯಮ, 2012.

6) ದಯಾನಂದ ಸಾಗರ ವಿಶ್ವವಿದ್ಯಾಲಯ ಅಧಿನಿಯಮ, 2012.

7) ಸಿ.ಎಂ.ಆರ್. ವಿಶ್ವವಿದ್ಯಾಲಯ ಅಧಿನಿಯಮ, 2013.

ಡೀಮ್ಡ್ ವಿಶ್ವವಿದ್ಯಾಲಯಗಳು :–

1) ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.

2) ಕ್ರೈಸ್ಟ್ ವಿಶ್ವವಿದ್ಯಾಲಯ, ಬೆಂಗಳೂರು.

3) ಯೆನೆಪೋಯ ವಿಶ್ವವಿದ್ಯಾಲಯ, ದೇರಳಕಟ್ಟೆ, ಮಂಗಳೂರು.

4) ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ, ಗಿಡ್ಡೇನಹಳ್ಳಿ, ಬೆಂಗಳೂರು.

5) ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಅಗಲಕೋಟೆ, ತುಮಕೂರು.

6) ಶ್ರೀ ದೇವರಾಜ ಅರಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್, ಕೋಲಾರ.

7) ನಿಟ್ಟೆ ವಿಶ್ವವಿದ್ಯಾಲಯ, ಮಂಗಳೂರು.

8) ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸಸ್, ಬೆಂಗಳೂರು.

9) ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ.

10) ಕೆ.ಎಲ್.ಇ. ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್, ಬೆಳಗಾವಿ.

11) ಜವಾಹರ್‌ಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರೀಸರ್ಚ್, ಜಕ್ಕೂರು, ಬೆಂಗಳೂರು.

12) ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿಶ್ವವಿದ್ಯಾಲಯ, ಮೈಸೂರು.

13) ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇನ್‌ಫರ್ಮೇಶನ್ ಟೆಕ್ನಾಲಜಿ, ಬೆಂಗಳೂರು.

14) ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

15) ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯ, ವಿಜಯಪುರ.

ಅನುಬಂಧ–2

ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು

1) ಸಂಸ್ಥೆಯು ವಿಶ್ವವಿದ್ಯಾಲಯವನ್ನು ನಡೆಸಲು ಅರ್ಹತೆ ಹೊಂದಿದ್ದು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಾದರೆ 25 ಎಕರೆ ಜಮೀನು, ಬಿ.ಎಂ.ಆರ್.ಡಿ.ಎ. ವ್ಯಾಪ್ತಿಯ ಒಳಗೆ ಇದ್ದಲ್ಲಿ, 40 ಎಕರೆ ಜಮೀನು ಮತ್ತು ಉಳಿದ ಸ್ಥಳದಲ್ಲಾದರೆ 60 ಎಕರೆ ಜಮೀನು ಹೊಂದಿರಬೇಕು ಹಾಗೂ ಒಂದೇ ಹಾಸಿಗೆಯದ್ದಾಗಿರಬೇಕು ಮತ್ತು ಅದರ ಮಾಲಿಕತ್ವ ಸಂಬಂಧಿಸಿದ ಟ್ರಸ್ಟ್/ ಫೌಂಡೇಷನ್/ ಸಂಸ್ಥೆ/ ವಿಶ್ವವಿದ್ಯಾಲಯದ ಹೆಸರಿನಲ್ಲಿರಬೇಕು.

2) ರೂ.25.00 ಕೋಟಿಗಳ ಶಾಶ್ವತ ಶಾಸನಬದ್ಧ ನಿಧಿಯನ್ನು ಸ್ಥಾಪಿಸಬೇಕು.

3) ಅಗತ್ಯ ಮೂಲಭೂತ ಸೌಕರ್ಯ ಮತ್ತು ಅರ್ಹ ಸಿಬ್ಬಂದಿ ಅವಶ್ಯಕತೆ ಹೊಂದಿರಬೇಕು.

4) ರಾಷ್ಟ್ರೀಯ ಪ್ರಾಧಿಕಾರಗಳಿಂದ ಗುಣಮಟ್ಟದ ಪ್ರಮಾಣ ಪತ್ರವನ್ನು ಪಡೆಯಬೇಕು.

5) ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇ.40 ರಷ್ಟು ಮೀಸಲಾತಿ ಒದಗಿಸಬೇಕು ಹಾಗೂ ಸರ್ಕಾರದ ಆದೇಶದನ್ವಯ ವಿವಿಧ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಾತಿಯನ್ನು ನೀಡತಕ್ಕದ್ದು.

6) ಸರ್ಕಾರವು ಒಬ್ಬ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಶುಲ್ಕ ನಿಯಂತ್ರಣ ಸಮಿತಿಯನ್ನು ರಚಿಸತಕ್ಕದ್ದು.

7) ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ / ವೈದ್ಯಕೀಯ ಶಿಕ್ಷಣ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಸದಸ್ಯರಾಗಿರತಕ್ಕದ್ದು.
8) 05 ವರ್ಷಗಳವರೆಗೆ ದೂರ ಶಿಕ್ಷಣಕ್ಕೆ ಅವಕಾಶವಿರುವುದಿಲ್ಲ ಹಾಗೂ ಯಾವುದೇ ಸಂಯೋಜಿತ ಕಾಲೇಜುಗಳನ್ನು ಹೊಂದಲು ಅವಕಾಶವಿರುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ಉತ್ತರ ಕೊಟ್ಟಿದ್ದಾರೆ. ಉತ್ತರವನ್ನು ಸರಿಯಾಗಿ ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಆದರೆ, ನನ್ನ ಮನವಿ ಏನೆಂದರೆ, Deemed University ಯಲ್ಲಿ ಸರ್ಕಾರಕ್ಕೇನೂ seat ಇಲ್ಲ, ಏನೋ ನಡೆದುಕೊಂಡು ಬಂದಿರುವುದು ಸರಿಯಾಗಿಲ್ಲ. ಸರ್ಕಾರಕ್ಕೆ seat ತೆಗೆದುಕೊಳ್ಳುವ ಕಡೆ ತಾವು ಸ್ವಲ್ಪ ಗಮನಹರಿಸಿದರೆ ಬಡ ಮಕ್ಕಳಿಗೆ, ಬುದ್ಧಿವಂತ ಮಕ್ಕಳಿಗೆ ಅನುಕೂಲವಾಗುತ್ತದೆ. ಅದರ ಕಡೆ ತಾವು ಗಮನಹರಿಸಿ. ಕುಲಸಚಿವರ ಬಗ್ಗೆ ಕೇಳುತ್ತಾ ನಾನು ಖಾಸಗಿಗೆ ಎಂದು ಕೇಳಿರಲಿಲ್ಲ. ಆದರೆ, ಅದನ್ನು ಬರೆಯುತ್ತಾ ನನ್ನ ಕಡೆಯಿಂದ ತಪ್ಪಾಗಿದೆ. ಪೇಪರ್‌ಗಳಲ್ಲಿ ಬರುತ್ತಿರುವುದನ್ನು ತಾವು ಗಮನಹರಿಸಿದರೆ Search Committee ಯಲ್ಲಿಯೇ ಬರುವುದಕ್ಕಿಂತ ಮುಂಚೆ ಆಗಿಬಿಡುತ್ತಿವೆ ಎನ್ನುವ ತರಹ ಪೇಪರ್‌ಗಳಲ್ಲಿ ಮಾಹಿತಿ ಬರುತ್ತಿದೆ. ತಾವು ಅದರ ಕಡೆ ಗಮನಹರಿಸಿ. ಸರ್ಕಾರ University ಗಳ ಕಡೆ ಗಮನಹರಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ : ಈ Deemed University ಎನ್ನುವಂಥದ್ದು ನಮ್ಮ ರಾಜ್ಯದಲ್ಲಿ ಯಾವಾಗ ಕಾಲಿಟ್ಟಿತ್ತು ಎಂದು ತಾವು ಹೇಳಬೇಕು. ಏಕೆಂದರೆ ಆಗಲೇ ನಾವು ಈ ವಿಚಾರಗಳ ಮೇಲೆ ಅನೇಕ ಸಲ ವಿರೋಧ ಮಾಡಿದ್ದೆವು. Deemed University ಗಳು ಎನ್ನುವುದರಲ್ಲಿ ಖಾಸಗಿಯಾದಂಥ ಒಂದು ರೀತಿ ಖಾಸಗೀಕರಣ ಪ್ರಾರಂಭವಾಯಿತು.

ಅಧ್ಯಕ್ಷರು : ಅದು ಇದರಲ್ಲಿ ಬರುವುದಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ : ಬರುವುದಿಲ್ಲ.

ಅಧ್ಯಕ್ಷರು : ನೀವು ಬೇರೆ ಪ್ರಶ್ನೆ ಕೇಳಿ.

ಶ್ರೀ ಆರ್.ವಿ. ದೇಶಪಾಂಡೆ : Deemed University ಯನ್ನು ನಾವು ಮುಂಜೂರು ಮಾಡುವುದಿಲ್ಲ. Deemed University ಎಂದರೇನು?

Actually it is a University with a character of University, Deemed University.ಅದನ್ನು ರಾಜ್ಯ ಸರ್ಕಾರ ಮಂಜೂರು ಮಾಡುವುದಿಲ್ಲ. Maximum ಅಂದರೆ ರಾಜ್ಯ ಸರ್ಕಾರದ ಕಡೆಯಿಂದ No objection ಕೇಳುತ್ತಾರೆ. ಹಾಗಾಗಿ, ಇವತ್ತು ತಾವು deemed Universityಯ ಬಗ್ಗೆ Medical seat ಬಗ್ಗೆ ಸಾಕಷ್ಟು ಚರ್ಚೆಯನ್ನು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಸರ್ಕಾರ ಇವತ್ತು ಒತ್ತಡ ಮಾಡಿ additional seats ತೆಗೆದುಕೊಳ್ಳಲಿಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಕೆಲವು ಕಡೆ ಯಶಸ್ವಿಯಾಗಿದ್ದೇವೆ. ಹಾಗಾಗಿ, ನಿಮ್ಮ ಸಲಹೆ ಒಳ್ಳೆಯದು ಇದೆ. ಇವತ್ತು ಎಷ್ಟು ಸಾಧ್ಯ ಅಷ್ಟು ನಮ್ಮ ಕರ್ನಾಟಕದ ಮಕ್ಕಳಿಗೆ, ಬಡ ಮಕ್ಕಳಿಗೆ ಅನುಕೂಲ ಮಾಡಲು ಆ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

ಬೆಂಗಳೂರು ವಿಶ್ವವಿದ್ಯಾಲಯದ ವಿಭಜನೆ

32(139) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರತಕ್ಕ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಭಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರತಕ್ಕ ಒಟ್ಟು ಕಾಲೇಜುಗಳ ಸಂಖ್ಯೆ 614.

(ಆ) ಹೌದು.

(ಇ) ಬೆಂಗಳೂರು ವಿಶ್ವವಿದ್ಯಾಲಯದ ವಿಭಜನೆ ಬಗ್ಗೆ ಉಭಯ ಸದನಗಳಿಂದ ಅಂಗೀಕೃತಗೊಂಡಿದ್ದ ಅಧಿನಿಯಮವು ಘನತೆವೆತ್ತ ಕುಲಾಧಿಪತಿಗಳಿಂದ ಷರಾದೊಂದಿಗೆ ಹಿಂತಿರುಗಿಸಲ್ಪಟ್ಟಿದ್ದು ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಗೋಪಾಲಯ್ಯ : ಉತ್ತರ ಬಂದಿದೆ. ಬೆಂಗಳೂರು ವಿಶ್ವವಿದ್ಯಾಲಯ ಎಂದರೆ 614 ಕಾಲೇಜುಗಳು ಸೇರಿ ಒಂದು ಬೆಂಗಳೂರು ವಿಶ್ವವಿದ್ಯಾಲಯ